# ಪವಿತ್ರ ಯೇಸುಬಾಲರಿಗೆ ಪ್ರಾರ್ಥನಾಮಾಲೆ

**ಪವಿತ್ರ ಯೇಸುಬಾಲರ ಜಪಮಾಲೆಯನ್ನು ಈ ಕೆಳಕಂಡ ರೀತಿಯಲ್ಲಿ ಹೇಳಬೇಕು:**

- ಪವಿತ್ರ ಕುಟುಂಬದ ಮಹಿಮೆಗಾಗಿ (ಪರಲೋಕ ಪ್ರಾರ್ಥನೆ - 3 ಸಲ)
- ಪವಿತ್ರ ಬಾಲಯೇಸುವಿನ ಹನ್ನೆರಡು ವರ್ಷಗಳ ಜ್ಞಾಪಕಾರ್ಥವಾಗಿ (ನಮೋ ಮರಿಯ ಪ್ರಾರ್ಥನೆ - 12 ಸಲ)
- ಪರಮತ್ರಿತ್ವದ ಸ್ತುತಿಗಾಗಿ (ಪಿತನಿಗೂ ಸುತನಿಗೂ - 3 ಸಲ)
- ಪರಲೋಕ ಪ್ರಾರ್ಥನೆಯನ್ನು ಹೇಳುವುದಕ್ಕೆ ಮೊದಲು ಪ್ರತಿಯೊಂದು ಸಲ "ದೇವರ ವಾರ್ತೆಯಾದವರು ಮನುಷ್ಯರಾದರು ಮತ್ತು ನಮ್ಮೊಡನೆ ವಾಸವಾಗಿದ್ದರು" ಎಂದು ಹೇಳಬೇಕು.
- ಪಿತನಿಗೂ ಸುತನಿಗೂ.... ಹೇಳುವುದಕ್ಕೆ ಮೊದಲು "ಪವಿತ್ರ ಯೇಸುಬಾಲರೇ, ನಮ್ಮನ್ನು ಆಶೀರ್ವದಿಸಿ ನಮ್ಮ ಕೋರಿಕೆಗಳನ್ನು ನೆರವೇರಿಸಿರಿ" ಎಂದು ಹೇಳಬೇಕು.

**ಪ್ರತಿ ನಮೋ ಮರಿಯ ಪ್ರಾರ್ಥನೆಯನ್ನು ಹೇಳುವಾಗ, ಬಾಲಯೇಸುವಿನ ಬಾಲ್ಯದ ಈ ಕೆಳಗಿನ ರಹಸ್ಯಗಳನ್ನು ಧ್ಯಾನಿಸಬಹುದು:**

| | |
|---|---|
| **01. ಮನುಷ್ಯಾವತಾರ** | **ನಮೋ ಮರಿಯಾ...** |
| **02. ಇಲಿಜಬೇತಳಿಗೆ ಇತ್ತ ಭೇಟಿ** | **ನಮೋ ಮರಿಯಾ...** |
| **03. ಕ್ರಿಸ್ತ ಜಯಂತಿ** | **ನಮೋ ಮರಿಯಾ...** |
| **04. ಕುರುಬರು ಸಲ್ಲಿಸಿದ ಆರಾಧನೆ** | **ನಮೋ ಮರಿಯಾ...** |
| **05. ಸುನ್ನತಿ ಆಚರಣೆ** | **ನಮೋ ಮರಿಯಾ...** |
| **06. ಜ್ಞಾನಿಗಳು ಸಲ್ಲಿಸಿದ ಆರಾಧನೆ** | **ನಮೋ ಮರಿಯಾ...** |
| **07. ದೇವಾಲಯದಲ್ಲಿ ಸಮರ್ಪಣೆ** | **ನಮೋ ಮರಿಯಾ...** |
| **08. ಈಜಿಪ್ಟಿಗೆ ಪಲಾಯನ** | **ನಮೋ ಮರಿಯಾ...** |
| **09. ಈಜಿಪ್ಟಿನಲ್ಲಿ ಅಜ್ಞಾತವಾಸ** | **ನಮೋ ಮರಿಯಾ...** |
| **10. ನಜರೇತಿಗೆ ಹಿಂತಿರುಗುವಿಕೆ** | **ನಮೋ ಮರಿಯಾ...** |

**11. ನಜರೇತಿನಲ್ಲಿ ವಾಸ** **ನಮೋ ಮರಿಯಾ...**

**12. ಬೋಧಕರ ಮಧ್ಯೆ ಯೇಸು** **ನಮೋ ಮರಿಯಾ...**

**ಪ್ರಾರ್ಥನೆ**

ಪವಿತ್ರ ಯೇಸುಬಾಲರೇ, ನಿಮ್ಮ ಸರ್ವಶಕ್ತಿ ಆಶ್ಚರ್ಯಕರವಾದುದು. ಆಶೀರ್ವದಿಸಲು ಚಾಚಿರುವ ನಿಮ್ಮ ಕೈ ಅದ್ಭುತಕರವಾದುದು. ಎಲ್ಲಾ ತರಹದ ಕೃಪಾವರಗಳನ್ನು ನಮ್ಮ ಮೇಲೆ ಸುರಿಸಿರಿ. ನಿಮ್ಮಲ್ಲಿ ಭರವಡೆಯಿಟ್ಟು ಪ್ರಾರ್ಥಿಸುವವರಿಗೆ ಕರುಣೆಯಿಂದ ಕಿವಿಗೊಡಿರಿ, ಆಮೆನ್.

(ಈ ಭಕ್ತಿಯು ಪವಿತ್ರ ಯೇಸುಬಾಲರಿಗೆ ಎಷ್ಟು ಪ್ರಿಯವಾದದ್ದು ಎಂಬುದನ್ನು ಯೇಸುಬಾಲರೇ ಸಂತ ಮಾರ್ಗರೇಟಮ್ಮಳಿಗೆ ಹೇಳಿದ ಮಾತುಗಳಿಂದ ವ್ಯಕ್ತವಾಗುತ್ತದೆ. ಈ ಜಪಮಾಲೆಯನ್ನು ಪೂರ್ಣವಿಶ್ವಾಸದಿಂದ ಹೇಳಿ ಅವರ ಪವಿತ್ರ ಬಾಲ್ಯವನ್ನು ಮಹಿಮೆಪಡಿಸುವವರಿಗೆ ವಿಶಿಷ್ಟ ವರಗಳನ್ನು ಪರಿಪಾಲಿಸುವುದಾಗಿ ವಾಗ್ದಾನ ಮಾಡಿದ್ದಾರೆ. ಎಲ್ಲಕ್ಕಿಂತಲೂ ಮಿಗಿಲಾಗಿ ಪವಿತ್ರ ಯೇಸುಬಾಲರ ಭಕ್ತರಿಗೆ ವಿರಕ್ತತ್ವ ಹಾಗೂ ಪರಿಶುದ್ಧತೆಯನ್ನು ಕಾಪಾಡುವಂಥ ಕೃಪೆಯನ್ನು ನೀಡುವುದಾಗಿ ಮಾತು ಕೊಟ್ಟಿದ್ದಾರೆ.

ಭಕ್ತಿಯುಳ್ಳ ವಿಶ್ವಾಸಿಗಳೇ, ಮಕ್ಕಳಿಗೆ ಜ್ಞಾನಸ್ನಾನದಲ್ಲಿ ಇದ್ದಂಥ ನಿಷ್ಕಪಟ ಮನಸ್ಸನ್ನು ಸದಾಕಾಲ ಅವರಲ್ಲಿ ಕಾದಿರಿಸಲು ಬಯಸುವಿರಾ? ಅಚಲ ಭಕ್ತಿಯನ್ನು ಅವರಲ್ಲಿ ಮೂಡಿಸಿರಿ. ವಿಶ್ವಾಸದಿಂದ ಈ ಜಪಮಾಲೆಯನ್ನು ಹೇಳುವ ಅಭ್ಯಾಸವನ್ನು ಮಾಡಿರಿ. ಪ್ರೀತಿಯಿಂದ ಯೇಸುಬಾಲರ ಬಳಿಗೆ ಅವರನ್ನು ಕರೆತನ್ನಿರಿ. ಯೇಸುಬಾಲರನ್ನು ಪ್ರೀತಿಸಿ ಅವರನ್ನು ಅನುಕರಿಸುವಂತೆ ಮಾಡಿರಿ.)